## ಈ ಲೇಖನದ ವಿಷಯಾನುಕ್ರಮಣಿಕೆ


ದೇವರ ಅಸ್ತಿತ್ವ 7/8 2

ದೇವರ ಅಸ್ತಿತ್ವ 2

ವೀರ್ಯ ಮತ್ತು ಶರೀರ 10




## ದೇವರ ಅಸ್ತಿತ್ವ 7/8

### ದೇವರ ಅಸ್ತಿತ್ವ

ದೇವರು ಎನ್ನುವ ಒಂದು ತತ್ವವಿದೆಯೇ ಎಂಬುದಕ್ಕೆ ಪ್ರಮಾಣವಾದರೂ ಇದೆಯೇ ಎಂಬ ಪ್ರಶ್ನೆಗೆ ಶ್ರೀಮದಾಚಾರ್ಯರು ನೀಡಿದ ಉತ್ತರ ಅತ್ಯಮೋಘವಾದದ್ದು . ಈಶಾವಾಸ್ಯದ ಭಾಷ್ಯದಲ್ಲಿ ಅವರು ಹೇಳಿರುವ ಆ ಮಾತು ಮೈನವಿರೇಳಿಸುತ್ತದೆ. ಇಷ್ಟೊಂದು ಸ್ಪಷ್ಟವಾಗಿದೆಯೇ ಭಗವಂತನ ಅಸ್ತಿತ್ವ , ಅದಕ್ಕಾಗಿ ಪ್ರಮಾಣಗಳನ್ನು ಹುಡುಕುವ ನಾವು ದಡ್ಡರಲ್ಲವೇ ಎನಿಸಿಬಿಡುತ್ತದೆ.

ಆಚಾರ್ಯರ ಮಾತಿನ ಪೂರ್ಣ ಅನುವಾದ ಮಾಡುವಷ್ಟು ನಾನು ಬುದ್ಧಿವಂತನಲ್ಲ. ಅವರ ಮಾತಿನ ಸವಿಯನ್ನು ಕನ್ನಡದ ನನ್ನ ಮಾತುಗಳಲ್ಲಿ ತುಂಬುವದಂತೂ ಆಕಾಶಕ್ಕೇಣಿ ಹಾಕುವ ಕೆಲಸ.

ದೇವರ ಅಸ್ತಿತ್ವದಲ್ಲಿ ನಂಬಿಕೆ ಬರಬೇಕಾದರೆ, ಅದಿರಲಿ, ಯಾವುದೇ ತತ್ವವನ್ನು ಪೂರ್ಣವಾಗಿ ಅರ್ಥ ಮಾಡಿಕೊಳ್ಳಬೇಕಾದರೆ ಸ್ವಯಂ ನಾವೇ ಆಚಾರ್ಯರ ಗ್ರಂಥಗಳನ್ನು ಓದಬೇಕು. ಅವರ ವಾಣಿಯ ರಸಾಸ್ವಾದವನ್ನು ಮಾಡುತ್ತ ಸರ್ವಮೂಲಗಳ ಮಧ್ಯದಲ್ಲಿ ಮುಳುಗಿಬಿಟ್ಟರೆ ಹಸಿವೆ ನೀರಡಿಕೆಗಳ ಪರಿವೆ ಸಹಿತ ಇರುವದಿಲ್ಲ. ಅಷ್ಟು ಮಧುರ ಮಧ್ವವಾಣಿ. ಸಮುದ್ರದ ನೀರನ್ನು ಬೊಗಸೆಯಲ್ಲಿ ತಂದು ನಿಮಗೆ ತೋರಿಸುತ್ತ ಇದು ಸಮುದ್ರಎಂದು ನಿಮಗೆ ಸಮುದ್ರದ ಪರಿಚಯ ಮಾಡಿಸಲು ಹೊರಟಿದ್ದೇನೆ. ಹಾಸ್ಯಾಸ್ಪದ. ಆದರೆ ಇದನ್ನು ನೋಡಿದ ನಿಮಗೆ ಸಮುದ್ರದ ಬಳಿ ಹೋಗಿ ಅದರ ಗಾಂಭೀರ್ಯ ವೈಶಾಲ್ಯಗಳನ್ನು ನಾವೇ ಅನುಭವಿಸಬೇಕೆಂಬ ಮನಸ್ಸಾದರೆ ಸಾಕು. ನಾನು ಕೃತಕೃತ್ಯ.

ಆಚಾರ್ಯರ ವಾಕ್ಸಮುದ್ರದಿಂದ ತಂದ ಬೊಗಸೆಯ ಜಲ ಮುಂದಿನದು —

ಕಲ್ಲು, ಮಣ್ಣು , ಮರಳು, ಹೂ ಎಲೆ, ಹೂವು, ಹಣ್ಣು, ನದಿ, ನೀರು, ಗಾಳಿ,ಬೆಂಕಿ, ಸಮುದ್ರ, ಪರ್ವತ, ಗ್ರಹ, ನಕ್ಷತ್ರ, ಮುಂತಾದ ಸಮಗ್ರ ಅಚೇತನ ಪ್ರಪಂಚದ ಅಸ್ತಿತ್ವವೇ ಭಗವಂತನ ಇರುವಿನ ಕುರುಹು.

ಆ ಕಲ್ಲು ಮಣ್ಣು ಮರಳುಗಳ ವಿನ್ಯಾಸ, ಎಲೆ ಹೂಗಳ ಸೌಂದರ್ಯ, ನೀರು ಗಾಳಿ ಬೆಂಕಿಗಳ ಅದಮ್ಯ ಸಾಮರ್ಥ್ಯ, ಪರ್ವತಗಳ ನೈಶ್ಚಲ್ಯ, ಸಮುದ್ರದ ಗಾಂಭೀರ್ಯ, ಒಟ್ಟಾರೆ ಈ ಸಮಗ್ರ ಪ್ರಕೃತಿಯ ಪಾರರಹಿತ ವೈವಿಧ್ಯೋಪೇತ ವಿಚಿತ್ರ ಗುಣ ಸಾಮರ್ಥ್ಯಗಳು ಆ ದೇವರ ಸರ್ವಶಕ್ತಿಗೆ ಸಾಕ್ಷಿಯಾಗಿ ನಿಂತಿರುವ ಪ್ರತ್ಯಕ್ಷ ಬೃಹತ್‌ಶಾಸನಗಳು.

ಇನ್ನು ಸಮಗ್ರ ಜೀವಸಂಕುಲ, ಆ ಸಂಕುಲದ ಅನಂತ ವೈವಿಧ್ಯ, ಒಬ್ಬೊಬ್ಬ ಜೀವನಲ್ಲೂ ಇರುವ ಸಮಗ್ರ ಸೃಷ್ಟಿಪರ್ವತದ ಉನ್ನತ ಶಿಖರದಂತಿರುವ ಮನಸ್ಸು, ಇದುವರೆಗೆ ಯಾರ ಕಣ್ಣಿಗೂ ಕಂಡಿರದ ಆ ಸೂಕ್ಷ್ಮ ಮನಸ್ಸಿನಿಂದ ಹೊರಹೊಮ್ಮಿ ಬರುವ ಅಸಂಖ್ಯಾತ ಭಾವನೆಗಳು, ಜಲಚರ ಭೂಚರ

ಖೇಚರ ಎಂಬ ಮೂರು ಪ್ರಭೇದಗಳಿಂದ ಬೆಳೆದು ನಿಂತಿರುವ, ಲಕ್ಷಲಕ್ಷ ಉಪಪ್ರಭೇದಗಳಿಂದ ತುಂಬಿದ ವಿಚಿತ್ರವಿಚಿತ್ರ ರೀತಿಯ ಯೋನಿಗಳು ಪ್ರತ್ಯೇಕಪ್ರತ್ಯೇಕವಾಗಿ ಜಗತ್ತಿನ ಪರಮಾದ್ಭುತ ಪದಾರ್ಥಗಳಂತಿರುವ ಸಮಗ್ರ ಜೀವರಾಶಿ ಭಗವಂತನ ಅಸ್ತಿತ್ವವನ್ನು ಸಮರ್ಥಿಸುವ ಪ್ರತಿಬಿಂಬಗಳು.

ಈ ಅನಂತ ಜೀವರಾಶಿಯ ನಿರಂತರ ಪ್ರಯಾಣದ ಒಂದೊಂದು ಹೆಜ್ಜೆಯ ಸಪ್ಪಳವೂ ಅವನ ಅಸ್ತಿತ್ವದ ಜಯಕಾರಗಳು. ಒಬ್ಬೊಬ್ಬ ಜೀವನಲ್ಲೂ ನಡೆಯುವ ಸಣ್ಣ ಪರಿಸ್ಪಂದವೂ ಅವನ ಮಹಾನ್ ಸಾಮರ್ಥ್ಯವನ್ನು ಸಾರಿ ಹೇಳುವ ಪತಾಕೆಗಳು.

ಪ್ರಪಂಚದ ಅತ್ಯಂತ ವಿಸ್ಮಯಾವಹ ಪದಾರ್ಥ ಎನಿಸುವ ನಮ್ಮ ದೇಹ, ಅದರಲ್ಲಿನ ಸಾವಿರಾರು ಪ್ರಕ್ರಿಯೆಗಳು, ಅದ್ಭುತ ಎನಿಸುವ ನರಗಳ ಸಂಯೋಜನೆ, ಸೈನಿಕರ ಕ್ರಮಬದ್ಧ ಕವಾಯತಿನ ಹಾಗೆ ಆಚೀಚೆ ಸರಿಯದೆ ಹರಿದಾಡುವ ರಕ್ತ, ಎಷ್ಟು ಅರ್ಥಮಾಡಿಕೊಂಡರೂ ನಿಗೂಢವಾಗಿ ಉಳಿಯುವ ಪಚನಪ್ರಕ್ರಿಯೆ, ಕರೆದರೆ ಬಾರದ, ಬಂದರೆ

ನಿರಾಕರಿಸಲು ಸಾಧ್ಯವಿಲ್ಲದ ನಿದ್ರೆ, ಕಣ್ಣು ಮುಚ್ಚಿ ಮುಸುಕು ಹೊದ್ದು ಮಲಗಿದ್ದರೂ ಮತ್ತೊಂದು ಪ್ರಪಂಚವನ್ನು ತೋರಿಸುವ ಕನಸುಗಳು, ಹೃದಯ, ಶ್ವಾಸಕೋಶ, ಯಕೃತ್ತು, ಮೂತ್ರಪಿಂಡಗಳು, ಗರ್ಭಾಶಯ, ವೀರ್ಯಕೋಶ, ಈ ಎಲ್ಲದರ ಕೆಲಸವನ್ನೂ ಮೇಲೆ ಕುಳಿತೇ ನಿಭಾಯಿಸುವ ಮೆದುಳು,  ಇಡಿಯ ಜಗತ್ತಿನ ಎಲ್ಲ ಪರಮಾದ್ಭುತ ಪದಾರ್ಥಗಳನ್ನೂ ಒಂದೆಡೆ ಕಲೆಹಾಕಿದರೂ ಸರಿಸಾಟಿಯಾಗದ ಮನುಷ್ಯನ ಮನಸ್ಸು ಇವೆಲ್ಲವೂ ನಮಗೊಬ್ಬ ನಿರ್ಮಾತೃವಿದ್ದಾನೆ ಎಂದು ನಮ್ಮ ಬಳಿಯೇ ಇದ್ದು ಸಾರಿ ಸಾರಿ ಹೇಳುವ ಡಿಂಗರಿಗರು.

ಮತ್ತು, ಕಾಮ,ಕ್ರೋಧ, ಲೋಭ, ಮೋಹಗಳ ಕೊಳಚೆಯಲ್ಲಿ ಬಿದ್ದು ಹೋಗಿ ದೇವರಿಂದ ತುಂಬ ದೂರ ಸರಿದು ಹೋದ ಕೋಟಿ ಕೋಟಿ ಮನುಷ್ಯರ ಮಧ್ಯದಲ್ಲಿಯೇ ಯಾವನೋ ಒಬ್ಬ ಜ್ಞಾನದಿಂದಲೋ, ಇಂದ್ರಿಯನಿಗ್ರಹದಿಂದಲೋ, ಔದಾರ್ಯದಿಂದಲೂ, ಕಾರುಣ್ಯದಿಂದಲೋ, ಅಪಾರ ಕರ್ತೃತ್ವ ಶಕ್ತಿಯಿಂದಲೋ, ನೇತೃತ್ವಗುಣದಿಂದಲೋ ಮಹಾಪುರುಷನಾಗಿ

ಕಂಗೊಳಿಸುತ್ತಾನಲ್ಲ ಅವನು ಭಗವಂತನ ಅಸ್ತಿತ್ವಕ್ಕೆ ಪ್ರತಿಮೆಯಾಗಿ ನಿಲ್ಲಬಲ್ಲ ಮಹಾ ವಿಭೂತಿ.

ಹೀಗೆ ಸಮಗ್ರ ಚೇತನಾಚೇತನಪ್ರಪಂಚ, ಅವುಗಳ ಗುಣ, ಸಾಮರ್ಥ್ಯ, ಕ್ರಿಯೆಗಳೆಲ್ಲವೂ ಪೃಥಕ್ ಪೃಥಕ್ಕಾಗಿ ದೇವರ ಇರವನ್ನು ಸಾಬೀತು ಪಡಿಸುತ್ತವೆ ಎಂಬುದನ್ನು ಶ್ರೀಮದಾಚಾರ್ಯರು ಸವಿವರಣವಾಗಿ ಪ್ರತಿಪಾದಿಸಿದ್ದಾರೆ. ಅವರ ಗ್ರಂಥಗಳ ಎಂಭತ್ತರಷ್ಟು ಭಾಗ ದೇವರ ಇರವನ್ನು ಸಾರಿ ಹೇಳುವ ಸಾವಿರಾರು ಪ್ರಮಾಣಗಳಿಂದ ತುಂಬಿ ಹೋಗಿದೆ. ಅವರ ಗ್ರಂಥಗಳ ಅಧ್ಯಯನ ಮಾಡಿದ ಮನುಷ್ಯನಿಗೆ ದೇವರ ಅಸ್ತಿತ್ವದ ಬಗ್ಗೆ ತಿಲಾಂಶದಷ್ಟು ಸಹಿತ ಅಪನಂಬಿಕೆ ಹುಟ್ಟಲು ಸಾಧ್ಯವಿಲ್ಲ.

ಬ್ರಹ್ಮಸೂತ್ರ ಭಾಷ್ಯದ ಶಾಸ್ತ್ರಯೋನಿತ್ವಾಧಿ-ಕರಣದಲ್ಲಿ ದೇವರು, ಜೀವ, ಕರ್ಮ, ಮುಂತಾದ ಅತೀಂದ್ರಿಯ ಪದಾರ್ಥಗಳ ಅಸ್ತಿತ್ವವನ್ನು ಒಪ್ಪಲಿಕ್ಕೆ ಆಚಾರ್ಯರು ಹನ್ನೆರಡು ಕಾರಣಗಳನ್ನು ನೀಡಿದ್ದಾರೆ. ಮೋಕ್ಷಧರ್ಮ ಪರ್ವದ ವಚನವನ್ನು ಉಲ್ಲೇಖಿಸಿ ಈ ತತ್ವದ ನೆಲೆಗಟ್ಟನ್ನು

ಸುಭದ್ರಗೊಳಿಸಿದ್ದಾರೆ. ಟೀಕಾಕೃತ್ಪಾದರು ತತ್ವಪ್ರಕಾಶಿಕಾದಲ್ಲಿ, ತ್ರಿವಿಕ್ರಮಪಂಡಿತಾ-ಚಾರ್ಯರು ತತ್ವಪ್ರದೀಪದಲ್ಲಿ ತುಂಬ ಸೊಗಸಾಗಿ ಆ ಮಾತುಗಳನ್ನು ವ್ಯಾಖ್ಯಾನಿಸಿದ್ದಾರೆ. ರಘೂತ್ತಮತೀರ್ಥರು ಪ್ರಾಯಃ ಮಹಾಭಾರತದ್ದು ಎಂದೆನಿಸುವ ಕೆಲವು ವಾಕ್ಯಗಳನ್ನು ಉಲ್ಲೇಖಿಸಿ ಟೀಕಾಕೃತ್ಪಾದರು ಹೇಳಿರುವ ಕೆಲವು ವಿಶೇಷ ಅಂಶಗಳಿಗೆ ಸಾಕಷ್ಟು ವಿವರಣೆಯನ್ನೊದಗಿಸಿದ್ದಾರೆ. ವಾದಿರಾಜರು ಯುಕ್ತಿಮಲ್ಲಿಕೆಯಲ್ಲಿ ಮೂರು ಪ್ರಸಂಗಗಳಲ್ಲಿ ಪೂರ್ವಾಚಾರ್ಯರ ಮಾತುಗಳನ್ನು ವಿಶದಗೊಳಿಸಿದ್ದಾರೆ. ಆ ಎಲ್ಲಾ ಮಹನೀಯರ ಚರಣಗಳನ್ನು ಭಕ್ತಿಯಿಂದ ನೆನೆದು ಅವರ ಮಾತುಗಳ ಅನುವಾದವನ್ನು ನಿಮ್ಮ ಮುಂದಿಡುತ್ತಿದ್ದೇನೆ.

ಆಚಾರ್ಯರು ನೀಡಿದ ಹನ್ನೆರಡು ಕಾರಣಗಳು ಇಂತಿವೆ.

**ರೇತೋ ಧಾತುರ್ವಟಕಣಿಕಾ**
**ಘೃತಧೂಮಾಧಿವಾಸನಮ್**
**ಜಾತಿಸ್ಮೃತಿರಯಸ್ಕಾಂತಃ**
**ಸೂರ್ಯಕಾಂತೋಂಬುಭಕ್ಷಣಮ್ ॥**

**ಪ್ರೇತ್ಯ ಭೂತಾಪ್ಯಯಶ್ಚೈವ**
**ದೇವತಾಭ್ಯುಪಯಾಚನಮ್**
**ಮೃತೇ ಕರ್ಮನಿವೃತ್ತಿಶ್ಚ**
**ಪ್ರಮಾಣಮಿತಿ ನಿಶ್ಚಯಃ ॥**

1. ವೀರ್ಯ
2. ಧಾತು
3. ಅಶ್ವತ್ಥದ ಬೀಜ
4. ತುಪ್ಪ
5. ಧೂಮಾಧಿವಾಸನ
6. ಜಾತಿಸ್ಮೃತಿ
7. ಅಯಸ್ಕಾಂತ
8. ಸೂರ್ಯಕಾಂತಿ
9. ನೀರು ಕುಡಿಯುವದು
10. ದೇಹದ ಮಣ್ಣುಗೂಡವಿಕೆ
11. ದೇವರಿಗೆ ಸಲ್ಲಿಸುವ ಪ್ರಾರ್ಥನೆ
12. ಮರಣ

ಇವೇ ಅಲ್ಲದೇ ಮತ್ತೆರಡು ಕಾರಣಗಳನ್ನು ನೀಡಿದ್ದಾರೆ.

13 ತಪಸ್ಸು
14 ಕರ್ಮಗಳು.

ಈ ಎಲ್ಲಾ ಕಾರಣಗಳು ಕೇವಲ ಭಗವಂತನ ಅಸ್ತಿತ್ವವನ್ನಷ್ಟೇ ಅಲ್ಲ ಜೀವ, ಕರ್ಮಗಳ ಅಸ್ತಿತ್ವವನ್ನೂ ಮತ್ತು ವೇದ, ಯುಕ್ತಿಗಳ ಪ್ರಾಮಾಣ್ಯವನ್ನೂ ಸಮರ್ಥಿಸುತ್ತವೆ.

## ವೀರ್ಯ ಮತ್ತು ಶರೀರ

ಮಗುವಿನ ಶರೀರ ತಂದೆಯ ವೀರ್ಯದಿಂದ ನಿರ್ಮಾಣವಾಗುತ್ತವೆ ಎನ್ನುವ ವಿಷಯವನ್ನು ಎಲ್ಲರೂ ಒಪ್ಪುತ್ತಾರೆ. ವೀರ್ಯ ಕಾರಣ, ದೇಹ ಅದರ ಕಾರ್ಯ, ಈ ಜ್ಞಾನ ನಮಗೆಲ್ಲ ಪ್ರತ್ಯಕ್ಷದಿಂದ ಬಂದದ್ದಲ್ಲ. ಅಂದರೆ ಹಾಲನ್ನು ನೋಡಿದಾಗ ಇದು ಬೆಳ್ಳಗಿದೆ ಎಂದು ಗೊತ್ತಾಗುವಂತೆ ದೇಹವನ್ನು ನೋಡಿದಾಗ ಇದು ವೀರ್ಯದಿಂದ ಜನಿಸಿದ್ದು ಎಂದು ತಿಳಿಯುವುದಿಲ್ಲ. ಹಾಗೆ ಕಣ್ಣಿಗೆ ಕಾಣಿಸಲೂ ಸಾಧ್ಯವಿಲ್ಲ . ಏಕೆಂದರೆ ಕಾರಣವಾದ ವೀರ್ಯವೇ ದೇಹದ ರೂಪ ಪಡೆದು ಕಾರ್ಯವಾಗಿ ಬಿಟ್ಟಿದೆ. ಹೀಗಾಗಿ ಆ ದೇಹಕ್ಕೆ ಕಾರಣವಾದ ವೀರ್ಯವೇ

ಈಗ ಇಲ್ಲದಿರುವಾಗ ದೇಹ ವೀರ್ಯಗಳು ಕಾರ್ಯ ಕಾರಣಗಳು ಎಂಬ ಜ್ಞಾನ ಹೇಗೆ ಬರಲು ಸಾಧ್ಯ? ಈ ಜ್ಞಾನ ನಮಗೆ ಉಂಟಾಗುವುದು ಯುಕ್ತಿ ಅಥವಾ ಆಗಮದಿಂದ. ಯುಕ್ತಿಯಿಂದ ನಮಗೆ ಈ ಜ್ಞಾನ ಉಂಟಾಗುವ ಪ್ರಕ್ರಿಯೆ ಹೀಗಿದೆ.

ಮಗುವಿನ ದೇಹ ನಮಗೆ ಕಂಡಿದ್ದು ಪ್ರಸವವಾದ ಬಳಿಕ. ಪ್ರಸವವಾಗುವವರೆಗೆ ದೇಹ ತಾಯಿಯ ಹೊಟ್ಟೆಯಲ್ಲಿತ್ತು.

ಒಂಭತ್ತನೆಯ ತಿಂಗಳಲ್ಲಿ ಬಸಿರಿನ ಗಾತ್ರವೆಷ್ಟಿತ್ತೋ ಅಷ್ಟು ಗಾತ್ರ ಮೂರನೆಯ ತಿಂಗಳಲ್ಲಿರಲಿಲ್ಲ. ಆದ್ದರಿಂದ ಆ ದೇಹ ಕ್ರಮವಾಗಿ ಅವಳ ಹೊಟ್ಟೆಯಲ್ಲಿ ಬೆಳೆಯುತ್ತಿತ್ತು ಎಂದೂ ನಿಶ್ಚಿತವಾಯಿತು.

ಅವಳಿಗೆ ಬಸಿರುಂಟಾಗಲು ಊಟ, ನಿದ್ರೆ, ಬಟ್ಟೆ, ಯಾವುದೂ ಕಾರಣವಲ್ಲ, ಏಕೆಂದರೆ ಅವೆಲ್ಲವೂ ಇದ್ದಾಗಲೂ ಅವಳು ಬಸುರಿಯಾಗಿರಲಿಲ್ಲ, ಇಲ್ಲದಿದ್ದರೂ ಬಸುರಿಯಾಗಲು ಸಾಧ್ಯವಿದೆ ಅಂದ

ಮೇಲೆ ಸಂಭೋಗವೊಂದೇ ಅವಳು ಬಸುರಿಯಾಗಲಿಕ್ಕೆ ಕಾರಣ.

ಕೇವಲ ಸಂಭೋಗವಲ್ಲ, ಪುರುಷನ ಸಮರ್ಥವಾದ ವೀರ್ಯ ಮತ್ತು ಅವಳ ಗರ್ಭಾಣುವಿನ ಸಂಪರ್ಕ. ಅಂದರೆ ವೀರ್ಯ ಅವಳ ಅಂಡಾಣುವಿನ ಜತೆಯಲ್ಲಿ ಸಂಪರ್ಕವನ್ನು ಹೊಂದಿದಾಗ ದೇಹ ನಿರ್ಮಾಣದ ಪ್ರಕ್ರಿಯೆ ಆರಂಭವಾಗುತ್ತವೆ. ಇಲ್ಲದಿದ್ದರೆ ಆರಂಭವಾಗುವದಿಲ್ಲ. ಆದ್ದರಿಂದ ವೀರ್ಯವೇ ದೇಹದ ಉತ್ಪತ್ತಿಗೆ ಕಾರಣ. ಎಂದು ನಮಗೆ ನಿಶ್ಚಯವಾಗುತ್ತದೆ.

ಇದೂ ಎಲ್ಲರೂ ಒಪ್ಪುವಂತಹ ಪ್ರಕ್ರಿಯೆ.

**ಶ್ರೀಮದಾಚಾರ್ಯರು ಹೇಳುವುದು ಮನುಷ್ಯನಿಗೆ ಕಾರಣವನ್ನು ಅನ್ವೇಷಿಸಿ ತಿಳಿಯುವ ಸಾಮರ್ಥ್ಯ ಉಂಟಲ್ಲ ಅ ಸಾಮರ್ಥ್ಯದಿಂದಲೇ ಇಡಿಯ ಜಗತ್ತಿನ ಎಲ್ಲ ಕಾರ್ಯಗಳಿಗೆ ಜನಕನಾದ ಭಗವಂತನನ್ನು ತಿಳಿಯಬೇಕು ಎಂದು.**

ಮತ್ತೂ ನಮ್ಮ ಯುಕ್ತಿ ಎಡವುವದಿಲ್ಲ ಎಂದೇನಿಲ್ಲ. ಅನೇಕ ಸಂದರ್ಭಗಳಲ್ಲಿ ನಾವು ತಿಳಿದದ್ದು ತಪ್ಪು

ಎಂದು ನಮಗೇ ತೋರಿರುತ್ತದೆ. ಈ ಕಾರಣಾನ್ವೇಷಣೆಯ ಪ್ರಕ್ರಿಯೆಗೆ ಅತ್ಯಂತ ಅವಶ್ಯಕವಾದದ್ದು ಆಯಾಯ ಕಾರ್ಯಕ್ಕೆ ಕಾರಣವಾಗಬಲ್ಲ ಪದಾರ್ಥಗಳ ಸ್ಪಷ್ಟವಾದ, ಶುದ್ಧ ಮತ್ತು ನಿಖರವಾದ ಜ್ಞಾನ. ವೀರ್ಯ ಎನ್ನುವ ವಸ್ತುವಿನ ಪರಿಚಯವೇ ಇಲ್ಲದ ವ್ಯಕ್ತಿಗೆ, ಸಂಭೋಗವೆಂದರೇನು ಎಂದೇ ತಿಳಿಯದ ವ್ಯಕ್ತಿಗೆ ದೇಹಕ್ಕೆ ಕಾರಣವಾದದ್ದು ವೀರ್ಯ ಎಂಬ ಜ್ಞಾನ ಬರುವದಿಲ್ಲ. ಹೀಗಾಗಿ ಎಲ್ಲ ಪದಾರ್ಥಗಳ ಸ್ಪಷ್ಟ ಜ್ಞಾನ ನಮಗಿರಬೇಕು ಜಗತ್ತಿನ ಎಲ್ಲಾ ಪದಾರ್ಥಗಳ ಜ್ಞಾನ ನಮಗೆ ಪ್ರತ್ಯಕ್ಷವಾಗಿ ತೋರಲು ಸಾಧ್ಯವಿಲ್ಲ.

ಏಕೆಂದರೆ, ಮೊದಲಿಗೆ ಈ ಜಗತ್ತಿನಲ್ಲಿ ಅನಂತ ಪದಾರ್ಥಗಳಿವೆ. ಆಮೇಲೆ ನಮ್ಮ ಜೀವನದ ಅವಧಿ ತುಂಬ ಸಣ್ಣದು, ಬಳಿಕ ನಮ್ಮ ತಿಳುವಳಿಕೆಯ ಮಟ್ಟವೂ ತೀರ ಕಡಿಮೆ, ಹೀಗಾಗಿ ಅನಂತ ಪದಾರ್ಥಗಳಿಂದ ತುಂಬಿದ ಪ್ರಪಂಚದ ಕಾರಣಾನ್ವೇಷಣೆ ಮಾಡಬೇಕಾದರೆ ಆ ಎಲ್ಲ ಪದಾರ್ಥಗಳ ಬಗ್ಗೆ , ಅವುಗಳ ಹುಟ್ಟಿನ ಕ್ರಮ ಇರುವ ರೀತಿಗಳ ಬಗ್ಗೆ ಸ್ಪಷ್ಟ ತಿಳುವಳಿಕೆ

ಇರಬೇಕು. ಎಲ್ಲವನ್ನೂ ನೋಡಿಯೇ ನಿರ್ಧರಿಸುವದು ಸಾಧ್ಯವೇ ಇಲ್ಲದ ಮಾತು. ಆದ್ದರಿಂದ ಅದೆಲ್ಲದರ ಬಗ್ಗೆ ತಿಳಿಸುವ ಸಾಧನ ನಮಗೊಂದು ಬೇಕೇ ಬೇಕು. ಆ ಸಾಧನವೇ ಆಗಮ. ಅಂದರೆ ವೇದಗಳು.
ಈ ವೇದಗಳು ಮತ್ತು ಅವುಗಳ ವಿವರಣ ರೂಪವಾದ ಮಹಾಭಾರತ ಪುರಾಣಗಳು ಈ ಜಗತ್ತಿನ ಅತ್ಯದ್ಭುತ ಪದಾರ್ಥಗಳು. ಕಾರಣ ಇವುಗಳಲ್ಲಿ ನಿರೂಪಿತವಾಗದ ವಿಷಯವಿಲ್ಲ. ಪರಿಹೃತವಾಗದ ಸಮಸ್ಯೆಯಿಲ್ಲ.

ಉದಾಹರಣೆಗಾಗಿ, ಈಗ ನಾವು ಚರ್ಚೆ ಮಾಡುತ್ತಿರುವ ದೇಹದ ಬೆಳವಣಿಗೆಯ ಬಗ್ಗೆ ಅವು ನೀಡಿರುವ ಮಾಹಿತಿಯನ್ನು ನಿಮ್ಮ ಮುಂದಿಡುತ್ತೇನೆ.

**ಕನ್ನಡಕವೂ ಇಲ್ಲದ ಕಾಲದಲ್ಲಿ ಹೆಣ್ಣಿನ ದೇಹದ ಒಳಗೆ ನಡೆಯುತ್ತಿದ್ದ ಪ್ರಕ್ರಿಯೆಗಳನ್ನು ಅದೆಷ್ಟು ಸ್ಪಷ್ಟವಾಗಿ ಈ ಗ್ರಂಥಗಳು ವಿವರಿಸಿವೆ ಎಂದು ನಾವು ಮೂಗಿನ ಮೇಲೆ ಬೆರಳಿಡುವಂತೆ ಆ ವಿವರಣೆಯಿದೆ.** ಇವತ್ತಿನ ಗೈನಕಾಲಜಿಯಿಂದ ಇಂದಿನ ಜನ ಈಗ ತಿಳಿದುಕೊಳ್ಳುತ್ತಿರುವ

ವಿಷಯಗಳನ್ನು ನಮ್ಮ ಪ್ರಾಚೀನ ಗ್ರಂಥಗಳು ಕಣ್ಣಿಗೆ ಕಟ್ಟುವ ಹಾಗೆ ವರ್ಣಿಸಿರುವದನ್ನು ನೋಡಿ. ಭಾಗವತದ ಶ್ಲೋಕಗಳಿವು —

**ಸ್ತ್ರಿಯಾಃ ಪ್ರವಿಷ್ಟ ಉದರಂ**
**ಪುಂಸೋ ರೇತಃಕಣಾಶ್ರಯಃ**
**ಕಲಲಂ ತ್ವೇಕರಾತ್ರೇಣ**
**ಪಂಚರಾತ್ರೇಣ ಬುದ್ಬುದಮ್**
**ದಶಾಹೇನ ತು ಕರ್ಕಂಧುಃ**
**ಪೇಶ್ಯಂಡಂ ವಾ ತತಃ ಪರಮ್ ॥**

ಪುರುಷನ ವೀರ್ಯದಲ್ಲಿರುವ ಜೀವ ಹೆಣ್ಣಿನ ಗರ್ಭವನ್ನು ಪ್ರವೇಶಿಸಿ ಅಲ್ಲಿ ಅಂಡಾಣುವಿನ ಜತೆಯಲ್ಲಿ ಸಂಪರ್ಕ ಹೊಂದುತ್ತವೆ. ಅ ವೀರ್ಯ ಅಂಡಾಣುವಿನ ಸಂಯೋಗದ ಪ್ರಥಮಾವಸ್ಥೆಗೆ "ಕಲಲ" ಎಂದು ಹೆಸರು, ಐದುದಿವಸಗಳಲ್ಲಿ ಅದು "ಬುದ್ಬದ" ವಾಗುತ್ತದೆ. ಆಂದರೆ ನೀರ್ಗುಳ್ಳೆಯ ಆಕಾರವನ್ನು ಪಡೆಯುತ್ತದೆ. ಹತ್ತು ದಿವಸಗಳಲ್ಲಿ "ಕರ್ಕಂಧು"ವಾಗುತ್ತದೆ. ಅಂದರೆ ಎಲಚಿ ಹಣ್ಣಿನ ಆಕಾರ ಪಡೆಯುತ್ತದೆ. ಆ ಬಳಿಕ ಪೇಶೀ ಅಂದರೆ ಗರ್ಭೋದಕ ಸುತ್ತುವರೆಯಲು ಆರಂಭಿಸುತ್ತದೆ.

ಸಸ್ತಿನಿಯಾಗದಿದ್ದಲ್ಲಿ ‘ಅಂಡ’ ಅಂದರೆ ಮೊಟ್ಟೆ ನಿರ್ಮಾಣವಾಗುತ್ತದೆ.

**ಮಾಸೇನ ತು ಶಿರೋ ದ್ವಾಭ್ಯಾಂ**
**ಬಾಹ್ವಂಘ್ರ್ಯಾದ್ಯಂಗವಿಗ್ರಹಃ**
**ನಖಲೋಮಾಸ್ಥಿ ಚರ್ಮಾಣಿ**
**ಲಿಂಗಚ್ಛಿದ್ರೋದ್ಭವಸ್ತ್ರಿಭಿಃ ॥**

ಮೊದಲನೆಯ ತಿಂಗಳು ತಲೆ ನಿರ್ಮಾಣವಾಗುತ್ತದೆ, ಎರಡನೆಯ ತಿಂಗಳು ಕೈ,ಕಾಲುಗಳು ಸಣ್ಣದಾಗಿ ಮೂಡಲಾರಂಭಿಸುತ್ತವೆ, ಆ ಬಳಿಕ ಉಗುರು, ಕೂದಲು, ಎಲುಬು ಚರ್ಮಗಳ ಉತ್ಪತ್ತಿಯಾಗುತ್ತದೆ. ಮೂರು ತಿಂಗಳು ಮುಗಿಯುವ ವೇಳೆಗೆ ಲಿಂಗಚ್ಛಿದ್ರ ಅಂದರೆ ಗಂಡೊ, ಹೆಣ್ಣೋ ಎಂದು ನಿರ್ಧಾರವಾಗಿಬಿಡುತ್ತದೆ. ಅದರೊಟ್ಟಿಗೆ ಉಳಿದ ಎಂಟು ದ್ವಾರಗಳು ತೆರೆಯುತ್ತವೆ.

**ಚತುರ್ಭಿರ್ಧಾತವಃ ಸಪ್ತ**
**ಪಂಚಭಿಃ ಕ್ಷುತ್ತೃಡುದ್ಭವಃ**
**ಷಡ್ಭಿಃ ಜರಾಯುಣಾ ವೀತಃ**
**ಕುಕ್ಷೌ ಭ್ರಾಮ್ಯತಿ ದಕ್ಷಿಣೇ ॥**

ನಾಲ್ಕನೆಯ ತಿಂಗಳಲ್ಲಿ ಮಾಂಸ, ಮೇದಸ್ಸು, ಮೊದಲಾದವುಗಳ ನಿರ್ಮಾಣ ಕಾರ್ಯ ನಡೆಯುತ್ತದೆ . ಐದರಲ್ಲಿ ಅದಕ್ಕೆ ಹಸಿವು, ಬಾಯಾರಿಕೆ ಉಂಟಾಗುತ್ತದೆ . ಆರರಲ್ಲಿ ದೇಹ ಮುಕ್ಕಾಲು ಪಾಲು ಪೂರ್ಣಗೊಂಡು ಕಡೆಯಲ್ಲಿ ತಾಯಿಯ ದೇಹದಲ್ಲಿ ತಿರುಗಲಾರಂಭಿಸುತ್ತದೆ. ಗಾಳಿ ಬೆಳಕುಗಳೂ ಓಡಾಡದ ಒಂದು ಕತ್ತಲೆಯ ಗವಿಯಂಥ ಪುಟ್ಟ ಚೀಲದಲ್ಲಿ ಒಂಭತ್ತು ತಿಂಗಳುಗಳಷ್ಟು ದೀರ್ಘವಾಗಿ ನಡೆಯುವ ಪ್ರಕ್ರಿಯೆಯನ್ನು ತಿಳಿದುಕೊಳ್ಳಲು ಇಂದಿನ ವೈದ್ಯಕೀಯಕ್ಕೆ ಸುಮಾರು ಎರಡು ಶತಮಾನಗಳು ಬೇಕಾಯಿತು.

ಇಷ್ಟಾದರೂ ಇನ್ನೂ ಇಂದಿನ ಗೈನಕಾಲಜಿಗೆ ಮೊದಲಿನ ತಿಂಗಳಲ್ಲಿ ನಡೆಯುವ ಪ್ರಕ್ರಿಯೆಯನ್ನು ಪೂರ್ಣವಾಗಿ ತಿಳಿದುಕೊಳ್ಳಲು ಸಾಧ್ಯವಾಗಿಲ್ಲ. ಆದರೆ ಸಂಭೋಗವಾದ ಕ್ಷಣದಿಂದ ಆರಂಭಿಸಿ ಹತ್ತು ದಿವಸಗಳ ವರೆಗಿನ ಪ್ರಕ್ರಿಯೆಯನ್ನೂ ನಮ್ಮ ಪ್ರಾಚೀನರು ಬರೆದಿಟ್ಟಿದ್ದಾರೆ. ಭಾಗವತದಲ್ಲಿ ಬಂದದ್ದು ಕೇವಲ ಸ್ಥೂಲ ವಿವರಣೆ.

ಮಹಾಭಾರತದಲ್ಲಿ, ಗರುಡಪುರಾಣದಲ್ಲಿ ಮತ್ತು ವೈದ್ಯಶಾಸ್ತ್ರದ ಗ್ರಂಥಗಳಲ್ಲಿ ವೈದ್ಯ ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕಾದ ಮತ್ತಷ್ಟು ಸೂಕ್ಷ್ಮವಾದ ವಿಷಯಗಳ ಪೂರ್ಣವಿವರಣೆಯಿದೆ. ಆಗ ಉಂಟಾಗುವ ಖಾಯಿಲೆಗಳ ಬಗ್ಗೆ, ಅನುಸರಿಸಬೇಕಾದ ಪಥ್ಯಗಳ ಬಗ್ಗೆ ಅಲ್ಲಿ ಅಧ್ಯಾಯಗಟ್ಟಲೆ ಬರೆದಿಟ್ಟಿದ್ದಾರೆ.

## ಕಣ್ಣಿಗೆ ಕಾಣದ ವಿಷಯವನ್ನು, ಕಣ್ಣಿಗೆ ಕಟ್ಟುವ ಹಾಗೆ ವರ್ಣಿಸಿರುವದು ವಿಸ್ಮಯ ಹುಟ್ಟಿಸುವದಿಲ್ಲ ?

ಇದೊಂದಲ್ಲ. ಜಗತ್ತಿನ ಎಲ್ಲ ವಿಷಯಗಳ ಬಗ್ಗೆ ಅಧಿಕೃತ ಪರಿಪೂರ್ಣ ಮಾಹಿತಿ ಈ ಗ್ರಂಥಗಳಲ್ಲಿವೆ. “ಅನುಕ್ತಂ ಪಂಚಭಿರ್ವೇದೈಃ ನ ತದ್ ವಸ್ತ್ವಸ್ತಿ ಕಿಂಚನ” ವೇದ, ಭಾರತ, ಪುರಾಣಗಳಲ್ಲಿ ಚರ್ಚಿತವಾಗದ ವಿಷಯ ಜಗತ್ತಿನಲ್ಲೇ ಇಲ್ಲ .

ಈಗ ಹೇಳಿ ಭಾಗವತ ಹೇಳಿರುವ ಈ ವಿವರಣೆಯನ್ನು ಇಂದಿನ ವೈದ್ಯಕೀಯ ಒಪ್ಪಿ ಸಾಬೀತು ಪಡಿಸಿದೆ. ಅಂದ ಮೇಲೆ ಅದು

ಹೇಳಿರುವ ಉಳಿದ ವಿಷಯಗಳನ್ನು ಒಪ್ಪದಿರಲು ಸಾಧ್ಯವೇ? ಮತ್ತು **ನಮ್ಮ ಪ್ರಾಚೀನರ ಈ ಗ್ರಂಥಗಳು ನಮ್ಮನ್ನೇನು ವಿನಾಶದ ಮಾರ್ಗದಲ್ಲಿ ನಡೆಸಿ ಹಾಳುಗೆಡಹಲು ಹೊರಟಿದ್ದಲ್ಲ. ಶಾಶ್ವತ ಸುಖದ ನೆಲೆಯನ್ನು ಹೊಂದುವ ಉಪಾಯವನ್ನು ತಿಳಿಸುವ ಉಪಕಾರೀ ಗ್ರಂಥಗಳು. ಅವುಗಳ ಉಪದೇಶವನ್ನು ಪಡೆಯದೇ ಇದ್ದಲ್ಲಿ ನಷ್ಟವಾಗುವದು ನಮಗೇ ಹೊರತು ಅವಕ್ಕಲ್ಲ.**

ಅವನ್ನು ರಚಿಸಿದ ಋಷಿ,ಮುನಿಗಳಿಗೆ, ವೇದವ್ಯಾಸರಿಗೆ ನಮ್ಮಿಂದ ಆಗಬೇಕಾದ್ದೇನು ಇಲ್ಲ. ಹೀಗೆ ಆಗಮಗಳಿಂದ ಸಕಲಪದಾರ್ಥಗಳ ಜ್ಞಾನವನ್ನು ಪಡೆದ ಮನುಷ್ಯ ಅದನ್ನು ತನ್ನ ಅನುಭವದ ಒರೆಗಲ್ಲಿಗೆ ಹಚ್ಚಿ ನಿರ್ಣಯಿಸಿಕೊಳ್ಳಬೇಕು. ಅದನ್ನೇ ಜ್ಞಾನ ಪಕ್ವವಾಗುವುದು ಎನ್ನುತ್ತಾರೆ.

ವೀರ್ಯದಿಂದ ಭಗವಂತನ ಅಸ್ತಿತ್ವವನ್ನು ಸಾಧಿಸುವದಕ್ಕಿಂತ ಮೊದಲು ಜೀವನ ಅಸ್ತಿತ್ವವೂ ಅದರಿಂದ ಸಿದ್ಧವಾಗುತ್ತದೆ ಎಂದು

ತ್ರಿವಿಕ್ರಮಪಂಡಿತಾಚಾರ್ಯರು ಪ್ರತಿಪಾದಿಸುತ್ತಾರೆ.

ವೀರ್ಯ ದೇಹದ ಉತ್ಪತ್ತಿಗೆ ಕಾರಣ. ನಿಜ, ಆದರೆ ವೀರ್ಯವನ್ನು ಸತ್ತ ಹೆಣ್ಣಿನ ದೇಹದಲ್ಲಿಟ್ಟರೆ ದೇಹ ಉತ್ಪತ್ತಿಯಾಗುವದಿಲ್ಲ ಅಂದ ಮೇಲೆ **"ಜೀವ ವಿರುವ ಹೆಣ್ಣಿನಲ್ಲಿ ಪ್ರವೇಶ ಮಾಡಿದ ಸಮರ್ಥ ವೀರ್ಯ ದೇಹಕ್ಕೆ ಕಾರಣ"** ಎಂದು ಒಪ್ಪಬೇಕು. ಆ ಹೆಣ್ಣಿನ ದೇಹದಲ್ಲಿ ಯಾವುದಿದ್ದಾಗ ದೇಹದ ಉತ್ಪತ್ತಿಯಾಗುತ್ತದೆಯೋ, ಯಾವುದಿಲ್ಲದಿದ್ದಾಗ ಉತ್ಪತ್ತಿಯಾಗಲು ಸಾಧ್ಯವಿಲ್ಲವೋ ಅದೇ ಜೀವ.

ಅಷ್ಟೇ ಅಲ್ಲ ಎಲ್ಲ ಜೀವಂತ ಹೆಣ್ಣುಗಳ ಗರ್ಭವನ್ನು ಪ್ರವೇಶಮಾಡಿದ ವೀರ್ಯ ದೇಹಕ್ಕೆ ಕಾರಣವಾಗುವದಿಲ್ಲ . ಆದ್ದರಿಂದ **"ತಾಯಿಯಾಗುವ ಎಲ್ಲಾ ದೈಹಿಕ ಸಾಮರ್ಥ್ಯವನ್ನು ಹೊಂದಿರುವ ಜೀವಂತ ಹೆಣ್ಣಿನ ಗರ್ಭವನ್ನು ಪ್ರವೇಶಮಾಡಿದ ಸಮರ್ಥ ವೀರ್ಯ ದೇಹಕ್ಕೆ ಕಾರಣ"** ಎಂದು ನಮ್ಮ ವಾಕ್ಯವನ್ನು ಹಿಗ್ಗಿಸಬೇಕು.

ಇದಷ್ಟೇ ಅಲ್ಲ, ತಾಯಿಯಾಗುವ ಎಲ್ಲ ಸಾಮರ್ಥ್ಯವಿದ್ದರೂ ಪುರುಷನ ವೀರ್ಯ ಪ್ರಜನನ ಸಮರ್ಥವಾಗಿದ್ದರೂ ಮಕ್ಕಳಾಗುವದಿಲ್ಲ ಯಾಕೆ ? ಸಾವಿರ ದೃಷ್ಟಾಂತಗಳು ನಮ್ಮ ಕಣ್ಣಮುಂದಿವೆ.

ವೈದ್ಯರು ಎಲ್ಲ ಪರೀಕ್ಷೆಗಳನ್ನು ಮಾಡಿ ಇಬ್ಬರಲ್ಲೂ ಯಾವುದೇ ದೈಹಿಕ ತೊಂದರೆ ಇಲ್ಲ ಎಂದು ಹೇಳುತ್ತಿದ್ದರೂ, ಸಂಭೋಗ ಪ್ರಕ್ರಿಯೆ ಸರಿಯಾಗಿ ನಡೆಯುತ್ತಿದ್ದರೂ ಮಕ್ಕಳಾಗದಿರುವುದು ಕಾಣುತ್ತಿದೆ. ಕಾರಣವೇನು ? ಕಾರಣವಿಲ್ಲದಿರಲು ಸಾಧ್ಯವಿಲ್ಲ .

ಆ ಕಾರಣ ದೇಹಕ್ಕೆ ಸಂಬಂಧಿಸಿದ್ದಾಗಿದ್ದರೆ ವೈದ್ಯರಿಗೆ ತಿಳಿಯಬೇಕಾಗಿತ್ತು. ಅವರೂ ಕೈಚಲ್ಲಿ ಕೂಡುತ್ತಾರೆ. ಅತೀ ಸೂಕ್ಷ್ಮ ಉಪಕರಣಗಳನ್ನು ಬಳಸಿ ಪರೀಕ್ಷಿಸಿದರೂ ಕಾರಣ ದೊರೆಯುತ್ತಿಲ್ಲ ಎಂದರೆ ಆ ಕಾರಣ ಕಣ್ಣಿಗೆ ಕಾಣುವಂತದ್ದಲ್ಲ ಎಂದೇ ಒಪ್ಪಬೇಕು. ಆಭರಣವೊಂದು ಕಾಣದಾದಾಗ ಮನೆಯ ಮೂಲೆ ಮೂಲೆಯನ್ನೂ ಪರಿಪೂರ್ಣವಾಗಿ ಹುಡುಕಾಡಿದರೂ ಸಿಗದಿದ್ದಾಗ ಕಳೆದಿದೆ ಎಂದೇ ನಿಶ್ಚಯಿಸುವದಿಲ್ಲವೇ ಹಾಗೆ.

ಅಂದರೆ ಸಮರ್ಥವಾದ ವೀರ್ಯ ಅಂಡಾಣುವನ್ನು ಸೇರದ ಹಾಗೆ, ಸೇರಿದರೂ ಮಗು ನಿರ್ಮಾಣವಾಗದ ಹಾಗೆ, ನಿರ್ಮಾಣವಾಗುತ್ತಿದ್ದರೂ ಮಧ್ಯದಲ್ಲಿಯೇ ಯಾವ ದೈಹಿಕ ಕಾರಣವಿಲ್ಲದಿದ್ದರೂ ಇದ್ದಕ್ಕಿದ್ದ ಹಾಗೆ ಪತನವಾಗುವ ಹಾಗೆ ಯಾವುದೋ ಒಂದು ಮನುಷ್ಯ ದೃಷ್ಟಿಗೆ ಅಗೋಚರ ವಾದ ವಸ್ತು ಕಾರ್ಯ ನಿರ್ವಹಿಸುತ್ತಿದೆ ಎಂದು ಒಪ್ಪಲೇ ಬೇಕು.

ಇಲ್ಲದಿದ್ದಲ್ಲಿ ಐದಾರು ವರ್ಷಗಳಾದರೂ ಮಕ್ಕಳಾಗದೇ ಮುಂದೊಂದು ದಿನ ಮಕ್ಕಳಾಗಲು ಕಾರಣವೇನು?   ಸುಮ್ಮನೆ ಮಧ್ಯಾಹ್ನದ ನಿದ್ದೆ ಮಾಡಿ ಎದ್ದ ಹೆಣ್ಣುಮಗಳಿಗೆ ಇದ್ದಕ್ಕಿದ್ದ ಹಾಗೆ ಗರ್ಭಪಾತವಾಗಲು ಕಾರಣವೇನು ? ಒಂದು ಕಾರಣವಿರಲೇಬೇಕು. ಆ ಕಾರಣ ಯಾವುದು ಎಂದು ತಿಳಿಯಲು ಸಾಧ್ಯವಾಗುತ್ತಿಲ್ಲ ಎಂದು ವೈದ್ಯರು ಹೇಳುತ್ತಿದ್ದಾರೆ. ಅಂದ ಮೇಲೆ ಅದು ಕಣ್ಣಿಗೆ ಕಾಣದ ಕಾರಣ ಎಂದು ನಿರ್ಧರಿಸಲೇಬೇಕಲ್ಲವೇ ?

ಮತ್ತು ಲಕ್ಷಾಂತರ ವೀರ್ಯಗಳ ಮಧ್ಯದಲ್ಲಿ ಇದೇ ವೀರ್ಯಾಣು ಇವಳ ಹೊಟ್ಟೆಯಲ್ಲಿ ಬೆಳೆಯಬೇಕು ಎಂದು ನಿರ್ಧರಿಸಿ, ಗಾಳಿ, ಬೆಳಕು ಇಲ್ಲದ ಒಂದು ಸಣ್ಣ ಚೀಲದಲ್ಲಿ ಸಾವಿರಾರು ಪ್ರಕ್ರಿಯೆಗಳನ್ನು ನಡೆಸುವ, ಜಗತ್ತಿನ ಅತ್ಯಂತ ವಿಸ್ಮಯ ಎನಿಸುವ **ಶರೀರವನ್ನು ನಿರ್ಮಾಣ ಮಾಡುವ ಒಂದು ವಸ್ತುವಿದೆ ಎಂದು ಒಪ್ಪಲೇ ಬೇಕು.**

**ಆ ವಸ್ತು ಜಡವಾಗಲು ಸಾಧ್ಯವಿಲ್ಲ.** ಕಾರಣ ಸಾವಿರ ಜನ ಬುದ್ಧಿವಂತರು ಸೇರಿದರೂ ಮಾಡಲಾಗದ ಕೆಲಸ ಅಲ್ಲಿ ನಡೆಯುತ್ತಿದೆ. ಮತ್ತು ಕೋಟಿಕೋಟಿ ಜೀವರಾಶಿಗಳಲ್ಲಿ ನಿರಂತರವಾಗಿ ನಡೆಯುತ್ತಿರುವದು ಏಕಪ್ರಕಾರದ ಪ್ರಕ್ರಿಯೆ. ಅಂದ ಮೇಲೆ ಎಲ್ಲವನ್ನೂ ನಡೆಸುತ್ತಿರುವವನು ಒಬ್ಬನೇ. ಮತ್ತು ಒಂದೇ ಪ್ರಕಾರದ ಪ್ರಕ್ರಿಯೆಯಲ್ಲಿರುವ ಅನಂತ ವೈವಿಧ್ಯಗಳು.

ಇವತ್ತಿನ ಆರುನೂರು ಕೋಟಿ ಜನರಲ್ಲಿ ಒಬ್ಬನಿದ್ದ ಹಾಗೆ ಮತ್ತೊಬ್ಬನಿಲ್ಲ. ಅಷ್ಟೇಕೆ ಒಬ್ಬನ ಬೆರಳಿನಲ್ಲಿನ ಗೆರೆಗಳಿದ್ದ ಹಾಗೆ ಮತ್ತೊಬ್ಬನ ಬೆರಳಿನಲ್ಲಿಲ್ಲ.

ಜಡ ಪದಾರ್ಥವೊಂದರಿಂದಲೇ ದೇಹ ನಿರ್ಮಾಣವಾಗುವದಾಗಿದ್ದರೆ ಮುದ್ರಣ ಯಂತ್ರದಲ್ಲಿ ನಿರ್ಮಾಣವಾಗುವ ಹಾಳೆಗಳ ಹಾಗೆ ಆರುನೂರು ಕೋಟಿ ಜನರೂ ಏಕ ಪ್ರಕಾರವಾಗಿರಬೇಕಿತ್ತು. ಹಾಗಿಲ್ಲ. ಅಂದರೆ ಪ್ರತೀ ಮುದ್ರಣದಲ್ಲಿಯೂ ಅದರ ವಿನ್ಯಾಸವನ್ನು ಬದಲಿಸುತ್ತಿರುವ ಮುದ್ರಕ ಒಬ್ಬ ಇದ್ದಾನೆ.

**ಹೀಗಾಗಿ ಒಬ್ಬ ಚೇತನನೇ ಆ ಕಾರ್ಯವನ್ನು ನಿರ್ವಹಿಸುತ್ತಿದ್ದಾನೆ ಎಂದು ಒಪ್ಪಲೇ ಬೇಕು.**
ಮತ್ತು ಒಂದೊಂದು ಹೆಣ್ಣಿನ ಗರ್ಭದಲ್ಲಿ ಒಬ್ಬೊಬ್ಬ ಚೇತನವಿದ್ದು ಆ ಕಾರ್ಯ ನಿರ್ವಹಿಸುತ್ತಾನೆ ಎಂದು ಒಪ್ಪಲು ಸಾಧ್ಯವಿಲ್ಲ. ಕಾರಣ, ಒಬ್ಬ ಮನುಷ್ಯನ ಹಾಗೆ ಮತ್ತೊಬ್ಬನಿಲ್ಲ. ಕಾರ್ಯ ಮಾಡುವ ರೀತಿ,ಆಲೋಚನೆಯ ವೈಖರಿ, ನಿರ್ವಹಿಸುವ ಸಾಮರ್ಥ್ಯ ಎಲ್ಲವೂ ಮನುಷ್ಯನಿಂದ ಮನುಷ್ಯನಿಗೆ ಭಿನ್ನವಾಗುತ್ತದೆ. ನೂರು ಜನಕ್ಕೆ ಒಂದೇ ರೀತಿಯ ಕೆಲಸ ಮಾಡಲು ಹೇಳಿದರೂ ಒಬ್ಬನ ಕೆಲಸದಿಂದ ಮತ್ತೊಬ್ಬನ ಕೆಲಸ ಪೂರ್ಣ ವಿಭಿನ್ನವಾಗಿರುತ್ತವೆ. ಆದರೆ ಈ ಕಾರ್ಯ ಹೀಗಿಲ್ಲ. ಹುಟ್ಟುತ್ತಿರುವ ದೇಹಗಳು ಭಿನ್ನವಾಗಿದ್ದರೂ ಅವುಗಳ

ಬಾಹ್ಯವಿನ್ಯಾಸದಲ್ಲಿ ಅನಂತ ವೈವಿಧ್ಯಗಳಿದ್ದರೂ ಆಂತರಿಕ ದೈಹಿಕ ಪ್ರಕ್ರಿಯೆ ಪ್ರಪಂಚದ ಉದ್ದಗಲಕ್ಕೂ ಒಂದೇ . ಒಂದೇ ಕಾರ್ಖಾನೆಯಿಂದ ನಿರ್ಮಾಣವಾಗಿ ಬರುವ ವಸ್ತುವಿನ ಹಾಗೆ. ಬಾಹ್ಯವಿನ್ಯಾಸ ಬೇರೆಯಾಗಿದ್ದರೂ ಅವು ಕಾರ್ಯ ನಿರ್ವಹಿಸುವ ವೈಖರಿ ಒಂದೇ ಆಗಿರುತ್ತದೆ.

ಹಾಗೆ ಅಮೇರಿಕದವನಾಗಲಿ ಜರ್ಮನಿಯವನಾಗಲಿ ಉತ್ತರದವನಾಗಲೀ ದಕ್ಷಿಣದವನಾಗಲಿ, ಅವರೆಲ್ಲರಲ್ಲೂ ರಕ್ತ ಹರಿಯುವ ರೀತಿ, ಹೃದಯದ ಬಡಿತ, ಜಠರ, ಯಕೃತ್ತು ಎಲ್ಲವೂ ಒಂದೇ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತವೆ. ಈ ಆಂತರಿಕ ಏಕರೂಪತೆ, **ಇವೆಲ್ಲವನ್ನು ನಿರ್ವಹಿಸುತ್ತಿರುವ ಚೇತನ ಒಬ್ಬನೇ ಹಲವರಲ್ಲ ಎಂದು ಸಾಬೀತು ಪಡಿಸುತ್ತದೆ.**

ಇನ್ನು, ಆ **"ಒಬ್ಬ ಚೇತನ" ಅತಿಮಾನುಷ ಸಾಮರ್ಥ್ಯವನ್ನು ಹೊಂದಿರುವವನು** ಎಂದು ಒಪ್ಪಲೇಬೇಕು. ಈ ವಿಸ್ತಾರವಾದ ಪ್ರಪಂಚದಲ್ಲಿ ಕ್ಷಣಕಾಲವೂ ಬಿಡದೆ ನಡೆಯುತ್ತಿರುವ ಈ

ಸೃಷ್ಟಿಪ್ರಕ್ರಿಯೆ ಈ ತತ್ವವನ್ನು ಒಪ್ಪುವಂತೆ ಆಗ್ರಹಿಸುತ್ತದೆ. ಮೂರು ಗಂಟೆ ಸತತವಾಗಿ ಕೆಲಸ ಮಾಡಿದರೆ ಶ್ರಮವಾಗುವ ನಮಗೆ ಈ ಕಾರ್ಯವನ್ನು ನಡೆಸುವದನ್ನು ಊಹಿಸಲೂ ಸಾಧ್ಯವಿಲ್ಲ. ನಿರಂತರ ಶ್ರಮದಲ್ಲಿ ಸ್ವಲ್ಪ ಕಾರ್ಯವನ್ನು ಮುಂದುವರಿಸಿದರೂ ಕೆಲಸ ಪರಿಪೂರ್ಣವಾಗುವುದಿಲ್ಲ. ಕೆಲಸ ಪರಿಪೂರ್ಣವಾಗಿ, ನಿರಂತರವಾಗಿ ಆಗುತ್ತಿದೆ ಎಂದ ಮೇಲೆ ಆ ಚೇತನ ಜೀವರ ಹಾಗೆ ಶ್ರಮ ಉಳ್ಳವನಲ್ಲ, ಶ್ರಮರಹಿತನಾದವನು, ಅರ್ಥಾತ್ ಇಡಿಯ ಜೀವ ಸಮುದಾಯವನ್ನು ಮೀರಿದ ಶಕ್ತಿ ಉಳ್ಳವನು ಎಂದೊಪ್ಪ ಬೇಕಾಗುತ್ತದೆ ಉಪನಿಷತ್ತಿನಲ್ಲಿ ಈ ಮಾತು ಬಂದಿದೆ — "ಏಷ ಸರ್ವಶಕ್ತಿಃ"

ಇನ್ನು **"ಮಹಾಶಕ್ತಿಉಳ್ಳ ಆ ಚೇತನ" ಕೇವಲಸಾಮರ್ಥ್ಯದ ಮೂಟೆಯಲ್ಲ. ಹೊರತು ಅಪಾರ ಜ್ಞಾನದ ರಾಶಿ ಎಂಬುದನ್ನೂ ಒಪ್ಪಬೇಕು.**

ಹಿಂದಿನ ಅಧ್ಯಾಯದಲ್ಲಿ ಪ್ರತಿಪಾದಿಸಿದ ಹಾಗೆ ಪ್ರತಿಯೊಬ್ಬ ಜೀವ ತನ್ನ ಪ್ರಾಚೀನ ಕರ್ಮದ

ಅನುಸಾರವಾಗಿಯೇ ಜನ್ಮಗಳನ್ನು ಪಡೆಯುತ್ತ ಹೋಗುತ್ತಾನೆ. ಹೀಗಾಗಿ ಒಂದು ಜೀವ ತಂದೆಯ ಹೊಟ್ಟೆಯಿಂದ ತಾಯಿಯ ಹೊಟ್ಟೆಯನ್ನು ಪ್ರವೇಶಿಸುವದಕ್ಕಿಂತ ಮೊದಲು ಈ ಜೀವವೇ ಇಂಥವರ ಮಗುವಾಗಿ ಹುಟ್ಟಬೇಕು ಎಂದು ನಿರ್ಧರಿಸಬೇಕು. ಇದು ಸುಲಭದ ನಿರ್ಧಾರವಲ್ಲ. ಒಂದು ಸಣ್ಣ ಉದಾಹರಣೆಯಿಂದ ಈ ಮಾತನ್ನು ವಿವರಿಸುತ್ತೇನೆ.

ಅನೇಕ ವರ್ಷಗಳಿಂದ ಮಕ್ಕಳಾಗಿಲ್ಲ ಎಂದು ಮಕ್ಕಳಿಗಾಗಿ ಹಪಹಪಿಸುತ್ತಿದ್ದ ದಂಪತಿಗಳಿಗೆ ಕಡೆಗೂ ಒಂದು ಮಗುವಾಯಿತು. ತುಂಬ ಮುದ್ದಾದ ಕೂಸು. ತಂದೆ ತಾಯಿಗಳಿಗಷ್ಟೇ ಅಲ್ಲ. ಇಡಿಯ ಮನೆಯವರೆಲ್ಲ ಮಗುವನ್ನು ಅಕ್ಕರೆಯಿಂದ ಸಂಭ್ರಮದಿಂದ ಬೆಳೆಸುತ್ತಿದ್ದರು. ಹೀಗೆ ಮಗು ಪ್ರತಿಯೊಬ್ಬರ ಕಣ್ಮಣಿಯಾಗಿ ಬೆಳೆಯುತ್ತ ಮೂರನೆಯ ವರ್ಷಕ್ಕೆ ಕಾಲಿಟ್ಟಿತ್ತು. ಇಡಿಯ ಕುಟುಂಬದ ಆನಂದದ ಸೆಲೆಯಾಗಿದ್ದ ಅ ಮಗು ಒಂದು ದಿನ ಅವಘಡದಿಂದ ತೀರಿ ಹೋಯಿತು. ಇಡಿಯ ಕುಟುಂಬ ದುಃಖದ ಮಡುವಿನಲ್ಲಿ ಮುಳುಗಿಬಿಟ್ಟಿತು.

ಈ ಘಟನೆಯನ್ನು ಕರ್ಮ ಸಿದ್ಧಾಂತದ ಆಧಾರದ ಮೇಲೆ ಸ್ವಲ್ಪ ವಿವೇಚಿಸಿ ತಿಳಿದರೆ ಗರ್ಭದಲ್ಲಿ ಮಗುವನ್ನು ನಿರ್ಮಾಣ ಮಾಡುತ್ತಿರುವ ಆ ಮಹಾಸಾಮರ್ಥ್ಯದ ಚೇತನ ಏಕಾಗಿ ಸರ್ವಜ್ಞನಾಗಿರಬೇಕು ಎಂದು ಅರ್ಥವಾದೀತು.

ಆ ಮಗು ಮೂರನೆಯ ವರ್ಷದಲ್ಲಿ ಸಾಯಬೇಕು ಎಂದರೆ ಆ ಅಲ್ಪಾಯುಷ್ಯಕ್ಕೆ ಕಾರಣವಾದ ಕರ್ಮವೊಂದು ಅದರೊಟ್ಟಿಗೆ ಇರಲೇಬೇಕು. ಅಪಘಾತ ಮುಂತಾದವೆಲ್ಲ ನಿಮಿತ್ತ ಮಾತ್ರ.

ಅನೇಕ ವರ್ಷದಿಂದ ಮಗುವಿಗಾಗಿ ಹಪಹಪಿಸಿ ಮುದ್ದಾದ ಮಗುವನ್ನು ಪಡೆದು ಆ ಮಗುವನ್ನು ಮೂರನೆಯ ವರ್ಷಕ್ಕೆ ಕಳೆದುಕೊಳ್ಳುವುದಕ್ಕೆ ಕಾರಣವಾದ ಕರ್ಮ ತಂದೆತಾಯಿಗಳಿಗಿರಬೇಕು. ಇಂಥ ಕರ್ಮವಿದ್ದಾಗ ದೀರ್ಘಯುಷ್ಯದ ಜೀವ ಅವರ ಮಗುವಾಗಿ ಹುಟ್ಟಿಬರಲು ಸಾಧ್ಯವಿಲ್ಲ.

ಆ ಮಗುವಿನ ಅಜ್ಜ, ಅಜ್ಜಿಗೆ ಮೊಮ್ಮಗುವನ್ನು ಕಳೆದು ಕೊಳ್ಳಲು ಕಾರಣವಾದ ಕರ್ಮವಿರಬೇಕು. ಆ ದಂಪತಿಗಳ ಸಹೋದರರಿಗೆ ಅಣ್ಣ ತಮ್ಮ

ಅಕ್ಕತಂಗಿಯರ ಮಗು ಹೋಯಿತು ಎನ್ನುವದಕ್ಕಾಗಿ ದುಃಖವಾಗುತ್ತದೆ. ಆ ದುಃಖಕ್ಕೆ ಕಾರಣವಾದ ಕರ್ಮವನ್ನು ಅವರು ಮಾಡಿರಬೇಕು. ಇಲ್ಲದಿದ್ದರೆ ಅವರಿಗೆ ದುಃಖವಾಗಲು ಸಾಧ್ಯವಿಲ್ಲ. ಹಾಗೆಯೇ ಆ ಕುಟುಂಬದ ಸ್ನೇಹಿತರಿಗೆ ತಮ್ಮ ಗೆಳೆಯನ ಮಗು ಸತ್ತಿದ್ದರಿಂದ ಆಗುವ ದುಃಖವನ್ನನುಭವಿಸುವ ಕರ್ಮವಿರಬೇಕು.

ಎಲ್ಲರಿಗೂ ಮಗು ಸತ್ತಿದ್ದರಿಂದಲೇ ದುಃಖವಾಗಿದೆ. ಆದರೆ ಆ ದುಃಖದ ಪ್ರಮಾಣ ಮಾತ್ರ ಎಲ್ಲರಲ್ಲೂ ಭಿನ್ನ. ತಾಯಿಗಾಗುವಷ್ಟು ದುಃಖ ತಂದೆಗಾಗಿರುವದಿಲ್ಲ. ಅವನಿಗಾದಷ್ಟು ಅಜ್ಜ, ಅಜ್ಜಿಯರಿಗಿಲ್ಲ, ಅವರಿಗಾಗುವಷ್ಟು ಸ್ನೇಹಿತರಿಗಾಗುವುದಿಲ್ಲ. ಸ್ನೇಹಿತರ ದುಃಖದಷ್ಟು ಒಡಹುಟ್ಟಿದವರಿಗಾಗುವದಿಲ್ಲ. ಎಲ್ಲರಿಗೂ ದುಃಖವಿದೆ. ಈ ದುಃಖದ ಕೇಂದ್ರಬಿಂದು ಮಗುವಿನ ಸಾವು. ಅಂದರೆ ಈ ಮಗುವನ್ನು ಕೇಂದ್ರವಾಗಿಟ್ಟುಕೊಂಡು ಇಡಿಯ ಕುಟುಂಬ ನಿರ್ಮಾಣವಾಗಬೇಕು. ಆ ಕುಟುಂಬಕ್ಕೆ ತಕ್ಕಂತೆ ಮಗುವಿನ ನಿರ್ಮಾಣವಾಗಬೇಕು.

ಮತ್ತು ಮಗುವಿನ ಸಾವೊಂದೇ ಜೀವನವಲ್ಲ. ಅದೊಂದು ಘಟನೆ ಮಾತ್ರ ಎಲ್ಲರಿಗೂ ಸಂಬಂಧ ಪಡುತ್ತದೆ ಎಂದಲ್ಲ. ನಮ್ಮ ಜೀವನದ ಪ್ರತಿಯೊಂದು ಘಟನೆ ಹತ್ತಾರು ಜನರಿಗೆ ಸಂಬಂದಿಸಿದ್ದೇ. ಅಂದಮೇಲೆ ಒಂದೊಂದು ಕರ್ಮದ ಎಳೆಗಳ ಸಂಬಂಧಗಳನ್ನು ತಿಳಿದುಕೊಂಡು ಇವನು ಇಂಥವನ ಮಗ , ತಮ್ಮ, ಗಂಡ, ಸ್ನೇಹಿತ ಎಂದೆಲ್ಲ ನಿರ್ಧರಿಸಿ ಎಲ್ಲ ಕರ್ಮಗಳಿಗೆ ಸರಿಯಾಗಿ ಹೊಂದುವ ಕುಟುಂಬ, ಸಮಾಜ ನಿರ್ಮಾಣವಾಗಬೇಕು.

ಒಬ್ಬೊಬ್ಬ ಜೀವನ ಕರ್ಮವೇ ಅನಂತ. ಜೀವರೂ ಅನಂತ. ಈ ಅನಂತ ಜೀವರಾಶಿಗಳ ಅನಂತಾನಂತ ಕರ್ಮವನ್ನು ತಿಳಿದು ಹೊಂದಿಸಿ ತಪ್ಪಾಗದ ಹಾಗೆ ಸೃಷ್ಟಿಕ್ರಿಯೆಯನ್ನು ನಡೆಸಬೇಕಾದರೆ ಅದೆಂತ ಜ್ಞಾನ ಆ ಚೇತನನಿಗಿರಲಿಕ್ಕಿಲ್ಲ ? ಹೀಗಾಗಿ ಈ ಮಹಾಶಕ್ತಿಯ ಚೇತನನನ್ನು “ಏಷ ಸರ್ವಜ್ಞಃ” ಎಂದೇ ಕರೆಯುತ್ತವೆ ಉಪನಿಷತ್ತುಗಳು.

ಹೀಗೆ ಸರ್ವವ್ಯಾಪಿ, ಸರ್ವಶಕ್ತ ಮತ್ತು ಸರ್ವಜ್ಞನಾದ ಚೇತನನನ್ನು ಒಪ್ಪದೇ ಇದ್ದಲ್ಲಿ ಸೃಷ್ಟಿಪ್ರಕ್ರಿಯೆಯೇ ನಡೆಯಲು ಸಾಧ್ಯವಿಲ್ಲ. ನಡೆಯುತ್ತಿದೆ ಎಂದಮೇಲೆ **ಆ ಚೇತನ ಇದ್ದಾನೆ. ಅವನೇ ದೇವರು. ಕಾರಣ ನಾವು ಒಪ್ಪಿರುವ ಆ ಚೇತನ ಸರ್ವವ್ಯಾಪೀ, ಸರ್ವಶಕ್ತ ಮತ್ತು ಸರ್ವಜ್ಞ.**

ನೋಡಿ ವೀರ್ಯ ಎನ್ನುವ ಶಬ್ದವೇ ಕೀಳುಜನರಲ್ಲಿ ಕಾಮವನ್ನು ಕೆರಳಿಸುತ್ತದೆ. ಆದರೆ ಭಗವತ್ಪಾದರು ಆ ವಸ್ತು ದೇವರ ಅಸ್ತಿತ್ವವನ್ನು ಸಾರಿ ಹೇಳುವ ಪದಾರ್ಥ ಎಂದು ಪ್ರತಿಪಾದಿಸುತ್ತಾರೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ



# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491